| | | |
|---|---|---|
| 9. | Dakishna Kannada | 354 |
| 10. | Chickamagalur | 225 |
| 11. | Chitradurga | 275 |
| 12. | Shimoga | 364 |
| 13. | Uttara Kannada | 209 |
| 14. | Dharwad | 439 |
| 15. | Belgaum | 473 |
| 16. | Bijapur | 363 |
| 17. | Gulbarga | 336 |
| 18. | Bidar | 176 |
| 19. | Raichur | 299 |
| 20. | Bellary | 220 |

---

**ಚಿಕ್ಕನಾಯಕನಹಳ್ಳಿ ಆರ್.ಎಂ.ಸಿ. ಕ್ಷೇತ್ರವನ್ನು ಮುಂದುವರಿಸುವ ತೀರ್ಮಾನ**

13 - ಶ್ರೀ ಎಸ್. ಬಸವಯ್ಯ (ಚಿಕ್ಕನಾಯಕನಹಳ್ಳಿ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಪ್ರತಿ ತಾಲ್ಲೂಕಿಗೆ ಒಂದರಂತೆ ಇರುವ ಆರ್.ಎಂ.ಸಿ. ಕ್ಷೇತ್ರವನ್ನು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಲ್ಲಿ ಮುಂದುವರೆಸಲು ಸರ್ಕಾರದವರು ಪರಿಶೀಲಿಸುವರೆ?*

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಚಿಕ್ಕನಾಯಕನಹಳ್ಳಿ ಮತ್ತು ಹುಳಿಯಾರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಸಂಯೋಜಿಸುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದ್ದು, ಸಂಯೋಜಿತ ಮಾರುಕಟ್ಟೆ ಸಮಿತಿಯ ಕೇಂದ್ರ ಸ್ಥಾನ ನಿಗದಿಪಡಿಸುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆ.

**ರಾಜ್ಯದಲ್ಲಿರುವ ಗೊಲ್ಲರ ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ**

14 - ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ ಇರುವ ಗೊಲ್ಲರ ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 500ಕ್ಕಿಂತ ಹೆಚ್ಚು ಜನಸಂಖ್ಯೆ ಅಥವಾ 100 ಕ್ಕೂ ಹೆಚ್ಚು ಕುಟುಂಬಗಳನ್ನು ಹೊಂದಿರುವ ಗೊಲ್ಲರ ಹಟ್ಟಿಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಸರ್ಕಾರವು ತೀರ್ಮಾನಿಸಿದೆ. ಮತ್ತು ಅಂತಹ ಹಟ್ಟಿಗಳನ್ನು ಗುರುತಿಸಿ ಸೂಕ್ತ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೂ ತಿಳಿಸಲಾಗಿದೆ.